# ನೈಸರ್ಗಿಕ ಕ್ಯಾರಿಬ್ಯಾಗ್ ಆದ ಅಡಿಕೆ ಎಲೆ

ಸಾಮಾನ್ಯವಾಗಿ ಹಿರಿಯರು ತೋಟದ ಕಡೆಗೆ ಹೋಗುವಾಗೆಲ್ಲ ಕೈಯಲ್ಲೊಂದು ಕತ್ತಿ ಹಿಡಿಯುವುದು ಸಹಜ. ಆದರೆ, ಅವರ್‍ಯಾರೂ ತೋಟದಲ್ಲಿ ಸಿಗುವ ಹಣ್ಣು ಕಾಯಿಗಳನ್ನು ಹೆಕ್ಕಿ ತರುವುದಕ್ಕೆಂದು ತಮ್ಮ ಜೊತೆಗೆ ಪ್ಲಾಸ್ಟಿಕ್ ಬ್ಯಾಗ್ ಒಯ್ಯುವುದು ತೀರಾ ಕಡಿಮೆ. ಏಕೆಂದರೆ, ತೋಟದಲ್ಲಿ ಬೀಳುವ ಅಡಿಕೆ ಹಾಳೆಯಿಂದಲೇ ತುರ್ತಿಗೆ ಬ್ಯಾಗ್ ಮಾಡಿಕೊಳ್ಳುವ ಕೌಶಲ ಅವರಿಗೆ ಗೊತ್ತು. ಹತ್ತು ಕಿಲೋ ತನಕ ಭಾರ ತೂಗುವಂತಹ ಕ್ಯಾರಿಬ್ಯಾಗ್‌ಗಳನ್ನು ಅವರು ಅಡಿಕೆ ಹಾಳೆ ಬಳಸಿ ಕೆಲವೇ ನಿಮಿಷದಲ್ಲಿ ಸಿದ್ಧಮಾಡಬಲ್ಲರು. ಯಾವುದೇ ಬುಟ್ಟಿ, ಕೈಚೀಲದ ಅವಶ್ಯಕತೆ ಇಲ್ಲದೇ ತೋಟದಲ್ಲಿ ಉದುರಿದ ಅಡಿಕೆ, ಜಾಯಿಕಾಯಿ, ಲಿಂಬು, ಇನ್ನಾವುದೇ ಹಣ್ಣು ತರಕಾರಿಗಳನ್ನು ಸಹ ಈ ಬಗೆಯ ಹಾಳೆ ಬ್ಯಾಗ್‌ನಲ್ಲಿ ಸುಲಭವಾಗಿ ತೋಟದಿಂದ ಮನೆ ತನಕ ಹಿಡಿದು ತರಬಹುದಾಗಿದೆ.

ನಿಜವಾಗಿಯೂ ಇದು ಶುದ್ಧ ನೈಸರ್ಗಿಕ ಹ್ಯಾಂಡ್ ಬ್ಯಾಗ್. ಯಾವುದೇ ಖರ್ಚು ಇದಕ್ಕಿಲ್ಲ. ಒಂದು ವಾರವಷ್ಟೇ ಇದರ ಬಾಳಿಕೆ. ಆ ನಂತರ ಇದನ್ನು ಉರುವಲಿಗೋ ಅಥವಾ ಗೊಬ್ಬರ ಗುಂಡಿಗೋ ಎಸೆದರಾಯಿತು. ಹಸಿಯಾದ ಅಡಿಕೆ ಹಾಳೆಯನ್ನು ಕತ್ತರಿಸಿ, ಅದನ್ನು ನಡುಭಾಗದಲ್ಲಿ ಬಗ್ಗಿಸಿ, ಒಂದು ಕೊಟ್ಟೆಯಾಗಿ ಮಾಡಿಕೊಂಡು, ಅದು ಬಿಚ್ಚದ ಹಾಗೆ ಸಣ್ಣ ಕಡ್ಡಿ ಚುಚ್ಚಿದರೆ ಆಯ್ತು, ಬ್ಯಾಗ್ ರೆಡಿ. ಸುಮಾರು ಅರ್ಧ ಬುಟ್ಟಿಯಷ್ಟು ಸಾಮಗ್ರಿ ಇದರೊಳಗೆ ಹಿಡಿಯುತ್ತದೆ. ಕೈಯಲ್ಲಿ ಹಿಡಿದುಕೊಂಡು ಸಾಗಿಸುವುದಕ್ಕೂ ಇದು ಹಿತಕರವಾಗಿದೆ. ಕಾಲ ಬದಲಾದಂತೆ ಹಿರಿಯರು ಮಾಡಿ ಬಳಸುತ್ತಿದ್ದ ಇಂತಹ ಕೌಶಲ್ಯಗಳು ಈಗಿನ ಯುವಕರಿಗೆ ಗೊತ್ತಿಲ್ಲದೆ ಹೋಗುತ್ತಿದೆ.

–ಜಿ.ಎಂ. ಬೊಮ್ನಳ್ಳಿ, ಶಿರಸಿ





# ‘ಚೂಡಿ ಪೂಜೆ’ ಎಂಬ ಬಾಂಧವ್ಯದ ಬೆಸುಗೆ

ಶ್ರಾವಣ ಮಾಸ ಶ್ರಾವಣದ ಪ್ರತಿ ಭಾನುವಾರ ಮತ್ತು ಶುಕ್ರವಾರ ಗರಿಕೆ ಹುಲ್ಲಿನೊಂದಿಗೆ ರಥ ಪುಷ್ಪ, ಕರವೀರ, ರತ್ನಗಂಧಿ, ಮಿಠಾಯಿ ಹೂವು ಹಾಗೂ ವೈವಿಧ್ಯಮಯ ಸಸ್ಯಗಳಾದ ಅನ್ವಾಳೆ, ಲಾಯೆಮಾಡ್ಡೊ, ನೆಲನೆಲ್ಲಿ, ಕಾಟ್‌ಚಿರ್ಡೋ, ಕಾಳ್ಯಾದೋಳೋ ಮಜ್ರಾನಾಂಕುಟ, ಗಾಂಟಿಮಾಡ್ಡೊ ಇತ್ಯಾದಿ ನಿಸರ್ಗ ಸಹಜವಾಗಿ ಬೆಳೆಯುವ ಕಾಟು ಹೂಗಳನ್ನೆಲ್ಲಾ ಜೋಡಿಸಿ ಬಾಳೆ ಹಗ್ಗದಿಂದ ಒಟ್ಟಿಗೆ ಕಟ್ಟಿ ಚೂಡಿ (ಸೂಡಿ) ಮಾಡಿ ಸೂರ್ಯ ದೇವನಿಗೆ ಪೂಜಿಸುತ್ತಾರೆ.

ಆಷಾಢದಲ್ಲಿ ಸೂರ್ಯರಶ್ಮಿಯ ದರ್ಶನವೇ ಅಪರೂಪ ಎನ್ನಬಹುದು. ಶ್ರಾವಣದಲ್ಲಿ ಸೂರ್ಯದೇವ ತನ್ನ ಸ್ವಕ್ಷೇತ್ರವಾದ ಸಿಂಹ ರಾಶಿಗೆ ಪ್ರವೇಶಿಸಿ ಕಾರ್ಮೋಡಗಳ ನಡುವಿನಿಂದ ತಿಳಿಕಿರಣಗಳನ್ನು ಸೂಸಲು ಪ್ರಾರಂಭಿಸುತ್ತಾನೆ. ಇಂತಹ ಸಂದರ್ಭದಲ್ಲಿ ಸೂರ್ಯದೇವನ ಆರಾಧನೆಯನ್ನು ಮಾಡಿ ಒಂದು ಮಾಸಗಳಿಂದ ವಾತಾವರಣದಲ್ಲಿ ಉಂಟಾದ ನಂಜನ್ನು ಸೂರ್ಯರಶ್ಮಿ ಗುಣಪಡಿಸುವುದರಿಂದ  ಆದಿತ್ಯನಿಗೆ ಚೂಡಿ ಅರ್ಪಿಸಿ ನಮಿಸುತ್ತಾರೆ.

ಈ ಚೂಡಿ ಪೂಜೆ ವೇಳೆ ಮಹಿಳೆಯರು ಚೂಡಿ ಕಟ್ಟಿ ಬೆಳಿಗ್ಗೆ ದೇವರಪೂಜೆ ಮತ್ತು ತುಳಸಿಕಟ್ಟೆ ಪೂಜೆ ಪೂರೈಸಿ, ನಭದೊಡೆಯನಿಗೆ ನಮಸ್ಕರಿಸಿ ಅವನಿಗೊಂದು ಚೂಡಿ ಸಮರ್ಪಿಸಿ, ಹಿರಿಯ ಮಹಿಳೆಯರಿಗೆ ಮತ್ತು ಅಕ್ಕಪಕ್ಕದ ಮಹಿಳೆಯರಿಗೆ ಹಾಗೂ ಹತ್ತಿರದಲ್ಲಿ ಇರುವ ಸಂಬಂಧಿಗಳ ಮನೆಗೆ ತೆರಳಿ ನೀಡುವ ಪರಿಪಾಟವಿದೆ. ಕೆಲವು ಕಡೆ ದೇವಸ್ಥಾನಕ್ಕೂ ಭೇಟಿ ನೀಡಿ ದೇವರಿಗೂ ಚೂಡಿ ನೀಡುವ ಸಂಪ್ರದಾಯವಿದೆ. ಈಗ ದೂರದ ಊರಿನಲ್ಲಿರುವವರಿಗೆ ಅಂಚೆ ಮೂಲಕ ಕಳುಹಿಸುವ ಅಭ್ಯಾಸ ರೂಢಿಸಿಕೊಳ್ಳಲಾಗಿದೆ. ಈ ಚೂಡಿ ಪೂಜೆಯ ಸಂಪ್ರದಾಯವು ಸಾಮಾಜಿಕವಾಗಿ ಅತಿ ಮುಖ್ಯವಾದ ಒಂದು ಆಚರಣೆ ಅಕ್ಕಪಕ್ಕದ ಮನೆಯವರೊಡನೆ ಮತ್ತು ಸಂಬಂಧಿಗಳ ನಡುವೆ ಉತ್ತಮ ಬಾಂಧವ್ಯ ಬೆಸೆಯಲು ಸಹಕಾರಿಯಾಗಿದೆ.

–ಅಂಜನ್ ಕಾಯ್ಕಿಣಿ, ಸಾಗರ

# ಬೇಸಿಗೆಯಲ್ಲೂ ನೀರು ಚಿಮ್ಮುವ ಊದುವರಿ

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಹಲಕುರ್ಕಿ ಗ್ರಾಮದಲ್ಲಿ ಪರೋಳೇಶ್ವರ ದೇವಸ್ಥಾನವಿದೆ. ಇಲ್ಲಿಂದ ಒಂದೂವರೆ ಕಿಲೋಮೀಟರ್ ದೂರದಲ್ಲಿ ಎತ್ತರದ ಬಂಡೆಯೊಂದಿದೆ. ಆ ಬಂಡೆಯ ಮೇಲೆ ಎಡಭಾಗಕ್ಕೆ ಮತ್ತು ಬಲಭಾಗಕ್ಕೆ ಎರಡು ರಂಧ್ರಗಳಿವೆ. ಈ ರಂಧ್ರಗಳ ಪೈಕಿ ಯಾವುದರಲ್ಲಾದರೂ ಒಂದರಲ್ಲಿ ಊದಿದರೆ, ಅದರ ಎದುರಿನ ರಂಧ್ರದಿಂದ ನೀರು ಚಿಮ್ಮುತ್ತದೆ. ಹೀಗಾಗಿಯೇ ಈ ಸ್ಥಳಕ್ಕೆ ‘ಊದುವರಿ’ ಎಂಬ ಹೆಸರು ಬಂದಿದೆ. ‘ಊದುವರಿ’ಯು ಆಡುಭಾಷೆಯ ಪದ. ಇಲ್ಲಿ ಮಳೆಗಾಲದಲ್ಲಷ್ಟೇ ಅಲ್ಲದೆ, ಬೇಸಿಗೆಯಲ್ಲೂ ನೀರು ಚಿಮ್ಮುವುದನ್ನು ಕಾಣಬಹುದು. ಹೀಗಾಗಿ ಈ ಸ್ಥಳ ವಿಸ್ಮಯಕಾರಿ ಎನಿಸಿದೆ. ಕುರಿಗಾಹಿಗಳಿಗೆ ಹಾಗೂ ದನಗಾಹಿಗಳಿಗೆ ನೀರಿನ ದಾಹ ತಣಿಸುವ ತಾಣವಾಗಿದೆ.

–ಮಹಾಂತೇಶ ಬಾಗೇವಾಡಿ, ಬಾದಾಮಿ

